ಮೇಬಲ್ ತೊಟ್ಟಿಲಿನ ಮೇಲೆ ಬಾಗುತ್ತಾ ಮಗುವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಳು.

"ಅವಳಲ್ಲಿ ಮೊದಲಿಗಿಂತ ಹೆಚ್ಚು ಜೀವಂತಿಕೆ ಎದ್ದು ಕಾಣಿಸುತ್ತಿದೆಯಲ್ಲವೇ ಮೇಬಲ್? ಅವಳ ಕೆನ್ನೆಗಳನ್ನು ನೋಡು? ಮೊಟ್ಟ ಮೊದಲ ಬಾರಿಗೆ ಗುಲಾಬಿ ರಂಗು ಮೂಡುತ್ತಿದೆಯಲ್ಲವೇ?" ಆಲ್ಬರ್ಟ್ ಹೇಳಿದ.

"ಹೌದು ಆಲ್ಬರ್ಟ್!" ತುಂಬಾ ಹೊತ್ತಿನ ಬಳಿಕ ಮೇಬಲ್ ಉತ್ತರಿಸಿದಳು. "ಇದೆಲ್ಲಾ ಹೇಗೆ ಸಾಧ್ಯವಾಯ್ತು ಡಿಯರ್? ಖಂಡಿತ, ನೀನು ಅಸಾಮಾನ್ಯನೇ ಸರಿ!" ಎಂದಳು ಅವನೆಡೆಗೆ ಹೆಮ್ಮೆಯ ದೃಷ್ಟಿ ಬೀರುತ್ತಾ.

"ಇದರಲ್ಲಿ ನನ್ನ ಪಾತ್ರವೇನೂ ಇಲ್ಲ ಮೇಬಲ್. ಡಾಕ್ಟರು ತಾಳ್ಮೆ ಕಳೆದುಕೊಳ್ಳಬೇಡಿ ಎಂದಿದ್ದರು. ಆ ಸಂದರ್ಭ ಇವತ್ತು ಒದಗಿ ಬಂತು ಅಷ್ಟೇ!"

"ನೀನು ಹೇಳಿದ್ದೆಲ್ಲಾ ನಿಜವಾಗಿರಲಿ ಎಂದು ದೇವರನ್ನು ಬೇಡಿಕೊಳ್ಳುತ್ತೇನೆ ಆಲ್ಬರ್ಟ್." ಅವಳು ಹೇಳಿದಳು.

"ನೀನು ನೋಡ್ತಾ ಇರು ಮೇಬಲ್. ನಾನು ಸತ್ಯವನ್ನೇ ಹೇಳುತ್ತಿದ್ದೇನೆ." ಮಗುವನ್ನೇ ನೋಡುವುದರಲ್ಲಿ ತಲ್ಲೀನಳಾಗಿದ್ದ ಅವಳ ಮುಖದ ಮೇಲೆ ಸಂತೃಪ್ತಿಯ ಭಾವ ಎದ್ದು ಕಾಣುತ್ತಿತ್ತು.

"ನಿನ್ನೆ ರಾತ್ರಿ ನಿನ್ನನ್ನು ನೋಯಿಸಿದೆ ಆಲ್ಬರ್ಟ್. ರಿಯಲೀ ಐಯಾಮ್ ಸಾರಿ. ನಾನು ತುಂಬಾ ದಣಿದಿದ್ದೆ ಮತ್ತು ಮಾನಸಿಕವಾಗಿ ಕಿರಿಕಿರಿ ಅನುಭವಿಸುತ್ತಿದ್ದೆ." ಎಂದಳು ಅವನ ಭುಜದ ಮೇಲೆ ಕೈಯಿಡುತ್ತಾ.

"ಇಂದಿನಿಂದ ಹೀಗೆ ಮಾಡೋಣ ಮೇಬಲ್. ರಾತ್ರಿಯ ಹೊತ್ತು ಮಗುವನ್ನು ನಾನು ನೋಡಿಕೊಳ್ಳುತ್ತೇನೆ. ಹಗಲಿನಲ್ಲಿ ನೀನು ನೋಡಿಕೊ. ನಿನಗೂ ವಿಶ್ರಾಂತಿ ಬೇಕು."

ಅವಳು ಅವನನ್ನೇ ನೋಡಿದಳು. ಅವಳ ಹಣೆಯ ಮೇಲೆ ನೆರಿಗೆಗಳು ಮೂಡಿದವು. "ಇಲ್ಲ ಆಲ್ಬರ್ಟ್. ಅದು ಸಾಧ್ಯವಿಲ್ಲ." ಅವಳು ಪ್ರತಿಭಟಿಸಿದಳು.

"ನೀನು ಮಾನಸಿಕ ರೋಗಿಯಾಗುವುದು ನನಗೆ ಸಹಿಸಲಾಗುತ್ತಿಲ್ಲ ಮೇಬಲ್. ನಾನು ಬಿಡಲಾರೆ."

"ಇಲ್ಲ ಆಲ್ಬರ್ಟ್. ಮಗುವನ್ನು ನೋಡಿಕೊಳ್ಳುವುದು ನನ್ನ ಪಾಲಿನ ಕೆಲಸ. ನಿನ್ನೆ ರಾತ್ರಿಯಂತೆ ಮತ್ತ್ಯಾವತ್ತೂ ಆಗೋದಿಲ್ಲ ಡಿಯರ್..."

ಆಲ್ಬರ್ಟ್ ಬಾಯಲ್ಲಿದ್ದ ಪೈಪನ್ನು ಹೊರತೆಗೆದು ತಂಬಾಕನ್ನು ಪರೀಕ್ಷಿಸತೊಡಗಿದ. ನಂತರ, "ಆಯ್ತು. ಆದರೆ, ಮಗುವಿನ ಹಾಲನ್ನು ತಯಾರು ಮಾಡುವುದು, ಬಾಟಲು ಶುಚಿ ಮಾಡುವುದು, ಬಿಸಿ ಮಾಡುವುದು ಮುಂತಾದವುಗಳನ್ನು ನಾನೇ ಮಾಡುತ್ತೇನೆ. ನಿನ್ನ ಭಾರ ಕೊಂಚ ಕಡಿಮೆಯಾಗಲಿ ಅಂತ ನನ್ನ ಆಶೆ."

ಅವಳು ಮತ್ತೊಮ್ಮೆ ಅವನನ್ನೇ, ಇವನಿಗೆ ತಲೆ ಕೆಟ್ಟಿಲ್ಲ ತಾನೆ? ಎಂಬಂತೆ ಸೂಕ್ಷ್ಮವಾಗಿ ಗಮನಿಸಿದಳು.

"ಮೇಬಲ್... ಏನಂತಂದ್ರೆ, ನನಗೆ ನಿನ್ನೆ ರಾತ್ರಿಯವರೆಗೂ ಮಗುವನ್ನು ನೋಡಿಕೊಳ್ಳಲು ನಿನಗೆ ಏನಾದ್ರು ಸಹಾಯ ಮಾಡಬೇಕು ಅಂತ ಅನಿಸಿರಲೇ ಇಲ್ಲ. ಸತ್ಯ ಹೇಳಬೇಕೂಂದ್ರೆ ನಾನು ನಿಜವಾಗಲೂ ಸ್ವಾರ್ಥಿ ಕಣೆ..."

"ನನ್ನಾಣೆ ಆಲ್ಬರ್ಟ್! ಇದು ಖಂಡಿತ ನಿಜವಲ್ಲ."

"ಇಲ್ಲ ಮೇಬಲ್. ನಾನು ಹೇಳುತ್ತಿರುವುದು ನಿಜವಾಗಲೂ ಸತ್ಯ. ಇಂದಿನಿಂದ ನನ್ನ ಪಾಲಿನ ಕೆಲಸ ಮಾಡಲು ನನಗೆ ಅವಕಾಶ ಮಾಡಿಕೊಡು ಪ್ಲೀಸ್..." ಅವನು ಭಾವುಕ ದನಿಯಿಂದ ಹೇಳಿದ.